MYSORE LEGISLATIVE ASSEMBLY

THIRTY-FOURTH DAY

Friday, 21st September 1956.

The House met in the Assembly Hall, Atara Kacheri, Bangalore, at Twelve of the clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS

Hakkipikkis and other Depressed Classes (steps for upliftment)

Q.—62. Sri H. K. SIDDAIYA (Belur—Scheduled Castes).—

Will the Government be pleased to state:—

(*a*) the population of Hakkipikkis, Gosaies, Sudugadusiddas, Havadigas, Maripujaris, Budubudikes and Burudebestas in the State ;

(*b*) whether they have taken any steps for the upliftment of these people ?

A.—Sri H. M. CHANNABASAPPA (Minister for Revenue and Agriculture).—

(*a*)

Hakkipikkis	...	140
Gosaies	...	855
Sudugadusiddas	...	270

(the figure represents the population,, in Mandya, Bellary, Chitaldrug, Kolar Hassan, Tumkur, Chickmagalur and Bangalore Districts only).

Havadigas	...	32
Maripujaris	...	152
Budubudikes	...	1,272
Burudebestas	...	101

(*b*) Yes.

ಶ್ರೀ ಎಚ್. ಕೆ. ಸಿದ್ದಯ್ಯ.—ನನ್ನ ಪ್ರಶ್ನೆಯ (ಬ) ಭಾಗಕ್ಕೆ ಉತ್ತರವಾಗಿ 'ಹೌದು' ಎಂದು ತಿಳಿಸಿದ್ದೀರಿ. ಈ ಜನರ ಅಭಿವೃದ್ಧಿಗಾಗಿ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಬುಡ ಬುಡಿಕೆಯವರು ಡಿಪ್ರೆಸ್ಡ್ ಕ್ಲಾಸಿನಲ್ಲಿ ಸೇರಿದ್ದಾರೆ. ಡಿಪ್ರೆಸ್ಡ್ ಕ್ಲಾಸಿನವರಿಗೆ ಏನೇನು ಸಹಾಯ ಸೌಲಭ್ಯಗಳು ದೊರಕುತ್ತಿವೆಯೋ ಅವೆಲ್ಲಾ ಇವರಿಗೂ ದೊರೆಯುತ್ತವೆ. ಸುಡುಗಾಡುಸಿದ್ಧರು ಇವರನ್ನು ಷೆಡ್ಯೂಲ್ಡ್ ಪಂಗಡಗಳಲ್ಲಿ ಸೇರಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದ್ದೇವೆ. ನಾವು ಕಳುಹಿಸಿರುವ ಶಿಫಾರ್ಸು ಅಂಗೀಕಾರವಾದ ಕೂಡಲೇ ಷೆಡ್ಯೂಲ್ ಪಂಗಡಗಳವರಿಗೆ ದೊರೆಯುತಕ್ಕ ಅನುಕೂಲಗಳೆಲ್ಲಾ ಇವರಿಗೂ ದೊರೆಯುತ್ತವೆ. ಉಳಿದವರೆಲ್ಲ ಹಿಂದುಳಿದ ಪಂಗಡದಲ್ಲಿ ಸೇರಿದ್ದಾರೆ. ಅವರಿಗೆ, ಹಿಂದುಳಿದ ಪಂಗಡಗಳವರಿಗೆ ದೊರೆಯುವ ಸಹಾಯ ಸೌಲಭ್ಯಗಳೆಲ್ಲ ದೊರೆಯುತ್ತವೆ.

ಶ್ರೀ ಯು. ಎಂ. ಮಾದಪ್ಪ.—ಇವರೆಲ್ಲ ಒಂದುಕಡೆ ಖಾಯಂಆಗಿ ವಾಸಿಸುವುದಿಲ್ಲವಾಗಿ ಇವರ ಬಗ್ಗೆ ಅಂಕಿಅಂಶಗಳನ್ನು ಹೇಗೆ ಸಂಗ್ರಹಿಸಿದ್ದಿರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಾಧ್ಯವಾದಷ್ಟೂ ಪತ್ತೆಹಚ್ಚಿ ಒಂದು ರೀತಿ ಹಾಕಿ ಓದಗಿಸಲಾಗಿದೆ.

Harijans (First Five-Year Plan)

Q.—308. Sri T. HANUMIAH (Hiriyur—Scheduled Castes).—

Will the Government be pleased to state:—

(*a*) the several programmes relating to economic and social development of Harijans included and carried out successfully under the First Five-Year Plan in the State ;

(*b*) the total amount allotted for the First Five-Year Plan of the State ; out of that, the amount spent for the financial and social upliftment of these people ?

A.—Sri H. M. CHANNABASAPPA (Minister for Revenue and Agriculture).—

(*a*) A scheme for construction of houses for the benefit of Depressed Class people has been undertaken entirely at the cost of the State Government.

*Aste risk indicates that the remarks or speeches have not been revised by the Member concerned.

(SRI H. M. CHANNABASAPPA.)

Under this scheme, it is planned to convert all the huts occupied by Depressed Class people into tiled houses. The cost of acquisition of lands for the purpose is also met by Government under this scheme.

The State Government have also sponsored a scheme called 'scheme for the removal of untouchability' with assistance from the Government of India by way of grants-in-aid to the extent of 50 per cent of the total expenditure incurred on the scheme. The following are the several items under which the scheme is launched.

1 Harijan Day.
2 Wells.
3 Housing.
4 Cottage Industries.
5 Aid to voluntary agencies.
6 Inter-caste dinner.
7 Holding of melas.
8 Issue of pamphlets.
9 Miscellaneous aid to Harijans.
10 Community Centres and supply of radios.
11 Education.

During the year 1953-54, a scheme was launched by the State Government under which loans were granted to Depressed Class people for improvement of agriculture, poultry farming and dairying.

(*b*) total amount allotted Rs. 1,00,00,000
Amount spent Rs. 1,09,68,000

including outlay on Central schemes.

ಶ್ರೀ ಟಿ. ಹನುಮಯ್ಯ.—(ಎ) ಭಾಗಕ್ಕೆ ಉತ್ತರ ವಾಗಿ 10-11 ಐಟಂಗಳನ್ನು ಕೊಟ್ಟಿದ್ದೀರಿ. ಹರಿಜನರ ಅಭಿವೃದ್ಧಿಗೋಸ್ಕರ ಇವೆಲ್ಲವನ್ನೂ ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—1953 ನೆಯ ಇಸವಿಯವರೆಗೂ 'housing scheme' ಮಾತ್ರ ಮೈಸೂರು ದೇಶದಲ್ಲಿ ಜಾರಿಯಲ್ಲಿತ್ತು. 1953 ರಿಂದೀಚೆಗೆ ಇಂಡಿಯಾ ಸರ್ಕಾರದವರು ಈ ಹನ್ನೊಂದು ಐಟಂಗಳನ್ನೂ ಸೇರಿಸಿಕೊಳ್ಳಬೇಕೆಂದು ಹೇಳಿದ್ದರಿಂದ ನಾವು ಕೆಲವು ಯೋಜನೆಗಳನ್ನು ಅಂಗೀಕಾರ ಮಾಡಿ ಕೊಂಡು ಅವಕ್ಕೆ ಹಣವನ್ನೊದಗಿಸಿ ಕೆಲಸ ಮಾಡುತ್ತಿದ್ದೇವೆ.

ಶ್ರೀ ಟಿ. ಹನುಮಯ್ಯ.—ನಾನು ಹರಿಜನರ ಆರ್ಥಿಕಾಭಿವೃದ್ಧಿಯಾಗಬೇಕೆಂದು ಕೇಳಿದ್ದೇನೆ. ತಾವು ಅವರಿಗೆ ವಾಸ ಮಾಡಲು ಮನೆಗಳನ್ನು ಕಟ್ಟಿಸಿಕೊಟ್ಟ ಮಾತ್ರಕ್ಕೆ ಅವರ ಆರ್ಥಿಕಾಭಿವೃದ್ಧಿಯಾಗುತ್ತದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಕೇಳಿರತಕ್ಕ ಪ್ರಶ್ನೆ 'economic and social development of Harijans' ಎಂದು. ಒಳ್ಳೆಯ ಮನೆಗಳಲ್ಲಿ ವಾಸ ಮಾಡುವುದು ನಾನಾ ರೀತಿಯಲ್ಲಿ ಅವರ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮವನ್ನುಂಟುಮಾಡುತ್ತದೆ. ಅವರ surrounding ಕೂಡ ಅವರ ಜೀವನವ ಮೇಲೆ ಒಳ್ಳೆಯ ಪರಿಣಾಮವನ್ನುಂಟುಮಾಡುತ್ತದೆ. That is also an item which will contribute materially to the social and economic development of the people.

ಶ್ರೀ ಟಿ. ಹನುಮಯ್ಯ.—ಈಗ ತಾವು ಸಾಮಾಜಿಕಾಭಿವೃದ್ಧಿಯ ವಿಷಯದಲ್ಲಿ ಕೆಲವು ಐಟಂಗಳನ್ನು ಕೊಟ್ಟಿದ್ದೀರಿ. ಹರಿಜನರ ಆರ್ಥಿಕ ಮಟ್ಟವನ್ನು ಉತ್ತಮಪಡಿಸಲು ಯಾವ ಯಾವ ಐಟಂಗಳನ್ನು ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ್ದೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಗೃಹ ಕೈಗಾರಿಕೆಗಳಿಗೆ ಸಾಲ ಕೊಡುವುದು; ಗ್ರಾಂಟುಗಳನ್ನು ಕೊಡುವುದು, ಎತ್ತುಗಳು, ವ್ಯವಸಾಯೋಪಕರಣಗಳು, ಗೊಬ್ಬರ ವಗೈರೆ ತೆಗೆದುಕೊಳ್ಳುವುದಕ್ಕೆ ಸಾಲ ಮತ್ತು ಗ್ರಾಂಟ್ ರೂಪದಲ್ಲಿ ಸಹಾಯವನ್ನು ಒದಗಿಸುವುದು ಇವನ್ನೆಲ್ಲ ಮಾಡಿದ್ದೇವೆ.

ಶ್ರೀ ಟಿ. ಹನುಮಯ್ಯ.—ಮೈಸೂರು ದೇಶದಲ್ಲಿ ಬಹು ಮಂದಿ ಹರಿಜನರಿಗೆ ಈ ಸೌಲಭ್ಯಗಳು ದೊರೆಯುತ್ತಿಲ್ಲವೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ಕಾರದವರು ಎಷ್ಟು ಹಣವನ್ನು ಈ ಪಾಂಚವಾರ್ಷಿಕ ಯೋಜನೆಯಲ್ಲಿ ಒದಗಿಸಿದ್ದಾರೆಯೋ ಅದರಲ್ಲಿ ಎಷ್ಟು ಜನರಿಗೆ ಸಹಾಯ ಕೊಡುವುದಕ್ಕೆ ಸಾಧ್ಯವೋ ಅಷ್ಟುಮಟ್ಟಿಗೆ ಒದಗುತ್ತಿದೆ.

ಶ್ರೀ ಟಿ. ಚನ್ನಯ್ಯ.—ಉತ್ತರದಲ್ಲಿ ಗೃಹ ಕೈಗಾರಿಕೆಗಳೆಂದು ತಿಳಿಸಿರುವುದರಲ್ಲಿ ಹರಿಜನರಿಗೆ ಸಂಬಂಧಪಟ್ಟ ಗೃಹ ಕೈಗಾರಿಕೆಗಳನ್ನು ಮೈಸೂರು ದೇಶದ ಯಾವ ಯಾವ ಭಾಗಗಳಲ್ಲಿ ಸ್ಥಾಪನೆ ಮಾಡಿದ್ದೀರೆಂಬುದನ್ನು ತಿಳಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಗೃಹ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದು ಕೇವಲ ಹರಿಜನರಿಗೆ ಸಂಬಂಧಪಟ್ಟದಲ್ಲ. ಗೃಹ ಕೈಗಾರಿಕೆಗಳು ಸಾಮಾನ್ಯವಾಗಿ ಎಲ್ಲ ಸಂಗಡಗಳ ಜನಗಳಿಗೆ ಸಂಬಂಧಪಟ್ಟವು. ಹರಿಜನರು ಈ ಗೃಹಕೈಗಾರಿಕೆಗಳಲ್ಲಿ ಅಭಿವೃದ್ಧಿ ಹೊಂದುವುದಕ್ಕೋಸ್ಕರ ನಾನಾ ರೀತಿಯಲ್ಲಿ ಅವರಿಗೆ ಸಹಾಯವನ್ನು ಮಾಡುತ್ತಿದ್ದೇವೆ.

ಶ್ರೀ ಟಿ. ಹನುಮಯ್ಯ.—ಹಾಗಾದರೆ ಹರಿಜನರ ಮುಖ್ಯ ಕೈಗಾರಿಕೆಗಳು ಯಾವುವು ಎಂಬುದು ತಮಗೆ ಗೊತ್ತಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಂಥದನ್ನೇ ಮಾಡಬೇಕು, ಇಂಥದನ್ನು ಮಾಡಬಾರದು ಎಂದು ನಿರ್ದಿಷ್ಟವಾಗಿ ಏರ್ಪಾಟು ಮಾಡಿಲ್ಲ.

ಶ್ರೀ ಟಿ. ಹನುಮಯ್ಯ.—ಹಾಗಾದರೆ ಹರಿಜನರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು ಅವರಲ್ಲಿ ಯಾವ ಯಾವ ಗೃಹ ಕೈಗಾರಿಕೆಗಳು ಮುಖ್ಯ ಎಂಬ ವಿಚಾರದಲ್ಲಿ statistics collect ಮಾಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹರಿಜನರು ಕೆಲವು ಗೃಹಕೈಗಾರಿಕೆಗಳನ್ನು ಅನೂಚಾನವಾಗಿ ಅನುಸರಿಸಿ ಕೊಂಡು ಬಂದಿದ್ದಾರೆ.

ಶ್ರೀ ಟಿ. ಹನುಮಯ್ಯ.— ಆ ಗೃಹಕೈಗಾರಿಕೆಗಳನ್ನು ಮೈಸೂರು ದೇಶದಲ್ಲಿ ತಾವೇನಾದರೂ ಉತ್ತಮಪಡಿಸಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಕೈಗಾರಿಕೆಗಳಲ್ಲಿ ಹರಿಜನರು ಹೆಚ್ಚಿನ ಸಂಪಾದನೆ ಮಾಡುವುದಕ್ಕೋಸ್ಕರವಾಗಿ ಅವರಿಗೆ ಭಂಡವಾಳ ಕೊಡುವುದು, ಗ್ರಾಂಟ್ ಕೊಡುವುದ , ವ್ಯವಸಾಯಕ್ಕೆ ಎತ್ತುಗಳನ್ನು ಕೊಂಡುಕೊಳ್ಳುವುದಕ್ಕೂ ಮತ್ತು ಗೊಬ್ಬರವನ್ನು ತೆಗೆದುಕೊಳ್ಳುವುದಕ್ಕೂ ಸಾಲ ರೂಪವಾಗಿ ಮತ್ತೆ ಗ್ರಾಂಟ್ ರೂಪವಾಗಿ ಹಣ ಕೊಡುತ್ತಿದ್ದೇವೆಂದು ನಾನಾಗಲೇ ಅರಿಕೆ ಮಾಡಿದ್ದೇನೆ.

ಶ್ರೀ ಟಿ. ಹನುಮಯ್ಯ.—ಹರಿಜನರ ಆರ್ಥಿಕ ಮಟ್ಟವನ್ನು ಮುಂದುವರಿಸಲಿಕ್ಕೆ ಕೈಗಾರಿಕೆಯಲ್ಲಾಗಲಿ ಅಥವಾ ವ್ಯವಸಾಯದಲ್ಲಾಗಲಿ ಸರ್ಕಾರದವರು ಹೆಚ್ಚಿನ ಗಮನ ಕೊಡುತ್ತಿಲ್ಲವೆನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೆಚ್ಚು ಗಮನ ಕೊಡಲಾಗುತ್ತಿದೆ ಎಂದು ಸರ್ಕಾರದವರ ಗಮನಕ್ಕೆ ಬಂದಿದೆ.

ಶ್ರೀ ಟಿ. ಹನುಮಯ್ಯ.—ಮೈಸೂರು ದೇಶದಲ್ಲಿ ಗೃಹ ಕೈಗಾರಿಕೆಗಳನ್ನು ಹರಿಜನರ ಕಾಲೊನಿಗಳಲ್ಲಿ ಅಥವಾ ಹರಿಜನರಿಗೋಸ್ಕರ ಎಷ್ಟು ಕಡೆ ಪ್ರಾರಂಭ ಮಾಡಿದ್ದೀರೆಂಬುದನ್ನು ದಯವಿಟ್ಟು ತಿಳಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರಿಗೆ ಸಹಾಯ ಸೌಕರ್ಯಗಳನ್ನು ಎಷ್ಟೆಷ್ಟು ಕೊಟ್ಟಿದ್ದೇವೆಂಬುದು ವರದಿ (report) ಯಲ್ಲಿ ನಮೂದಾಗಿದೆ. ಹರಿಜನರಿಗೆ ದನಗಳನ್ನು ಕೊಂಡುಕೊಳ್ಳುವುದಕ್ಕೆ ಮತ್ತು ವ್ಯವಸಾಯೋಪಕರಣಗಳನ್ನು ಕೊಂಡುಕೊಳ್ಳುವುದಕ್ಕೆ ಎಷ್ಟೊಂದು ಹಣವನ್ನು ಕೊಡುತ್ತಿದ್ದೇವೆ. ಅದೆಲ್ಲ ತಮಗೆ ಗೊತ್ತಿದೆ.

ಶ್ರೀ ಎಂ. ಘಾದಯ್ಯ.—ಇಂಡಿಯಾ ಸರ್ಕಾರದವರು ಶೇಕಡ 50 ಭಾಗ ಕೊಡುತ್ತಾರೆ, ಬಾಕಿ ಶೇಕಡ 50 ಭಾಗ ನಮ್ಮ ಸರ್ಕಾರ ಹಾಕಿ ಕೆಲಸಮಾಡಬೇಕು ಎಂದು ಹೇಳಿದಿರಿ. ಈ ಯೋಜನೆ ಮಂಜೂರಾದ ಮೇಲೆ ಎಷ್ಟು ಖರ್ಚು ಮಾಡಿದ್ದೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—1953-54 ರಲ್ಲಿ 15 ಲಕ್ಷ ರೂಪಾಯಿಗಳನ್ನು ಇಂಡಿಯಾ ಸರ್ಕಾರ ಕೊಟ್ಟಿದ್ದರಲ್ಲಿ 2 ಲಕ್ಷ 89 ಸಾವಿರ ರೂಪಾಯಿಗಳು ಅಲಾಟ್‌ಆಗಿತ್ತು. ಅದರ ಪೈಕಿ 2,64,995 ರೂಪಾಯಿಗಳು ಖರ್ಚಾಗಿವೆ. 1954-55 ರಲ್ಲಿ 6 ಲಕ್ಷ 41 ಸಾವಿರ ರೂಪಾಯಿಗಳು, 1955-56 ರಲ್ಲಿ 5,71,939 ರೂಪಾಯಿಗಳು ಖರ್ಚಾಗಿವೆ. ಈ ವರ್ಷದ ಅಂಕಿಅಂಶ ನನ್ನಲ್ಲಿಲ್ಲ.

ಶ್ರೀ ಎಂ. ಮಾದಯ್ಯ.—ಈಗ ಎಷ್ಟು ಖರ್ಚು ಮಾಡುತ್ತೀರೋ ಅಷ್ಟು ಹಣ ಅವರು ಕೊಡುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೊದಲು ಇಷ್ಟು ಹಣ ಓದಗಬಹುದೆಂದು ಒಂದು ಸೂಚನೆ ಕೊಡುತ್ತಾರೆ. ಅದಕ್ಕೆ ಅನ್ವಯಿಸುವಹಾಗೆ ಒಂದು ಸ್ಕೀಂ ಮಾಡುತ್ತೇವೆ. ಅದರಲ್ಲಿ ಅರ್ಧಹಣ ಅವರು ಕೊಡುತ್ತಾರೆ. ಮಿಕ್ಕದ್ದು ನಾವು ಕೊಡಬೇಕು.

ಶ್ರೀ ಎಂ. ಮಾದಯ್ಯ.—ಇದರ ಪೈಕಿ ಕೊಂಚ ಹಣವನ್ನು ನಿಮ್ಮ ವರ್ಗದವರ ಅಭಿವೃದ್ಧಿಗಾಗಿ ವಿನಿಯೋಗಿಸಬೇಕು. ಅದಕ್ಕೆ ಕೆಲವು ಪ್ರೋಗ್ರಾಂಗಳನ್ನು ಹಾಕಬೇಕು. ಒಬ್ಬ ಸ್ಪೆಷಲ್ ಆಫೀಸರನ್ನು ನೇಮಕ ಮಾಡಬೇಕು ಎಂದು ತೀರ್ಮಾನ ಮಾಡಿದ್ದನ್ನು ಸರ್ಕಾರ ಒಪ್ಪಿತ್ತು. ಅದನ್ನು ಇಂಪ್ಲಿಮೆಂಟ್ ಮಾಡಿದ್ದೀರಾ ?

Sri H. M. CHANNABASAPPA.—I would like to have notice for that.

ಶ್ರೀ ಎಂ. ಮಾದಯ್ಯ.—ಹನ್ನೊಂದನೆಯ ಐಟಂನಲ್ಲಿ ನಮೂದಿಸಿರುವ ವಿದ್ಯಾಭ್ಯಾಸದ ಅಭಿವೃದ್ಧಿಗಾಗಿ ಡಿಪ್ರೆಸ್ಡ್ ಕ್ಲಾಸ್ ಅಮೀಲಿಯೋರೇಷನ್ ಫಂಡಿನಿಂದ ಹಣ ಸಾಕಷ್ಟು ಓದಗಿಸಿ ಹೆಚ್ಚಾಗಿ ವಿದ್ಯಾರ್ಥಿ ವೇತನ ವಗೈರೆ ಕೊಟ್ಟು ಪ್ರೋತ್ಸಾಹಿಸಲು ಈ ಅಧಿವೇಶನದಲ್ಲಿ ನಪ್ಲಿಮೆಂಟರಿ ಗ್ರಾಂಟನ್ನು ತರಲು ಆಲೋಚನೆ ಮಾಡುತ್ತೀರಾ ?

Sri H. M. CHANNABASAPPA.—I want notice for that.

ಶ್ರೀ ವಿ. ಮಸಿಯಪ್ಪ.—ಉತ್ತರದಲ್ಲಿ ನಮೂದಿಸಿರುವ 11 ಐಟಂಗಳಿಗೆ ವರ್ಷದ ಕೂನೆಯಲ್ಲಿ ಫೆಬ್ರುವರಿ ಅಥವಾ ಮಾರ್ಚಿ ತಿಂಗಳಲ್ಲಿ ಹಣ ಓದಗಿಸಿ ಜರೂರಾಗಿ ಖರ್ಚುಮಾಡಬೇಕೆಂದು ಸರ್ಕ್ಯುಲರ್ ಕಳುಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿರ್ದಿಷ್ಟವಾಗಿ ಯಾವುದನ್ನಾದರೂ ಗಮನಕ್ಕೆ ತಂದರೆ ವಿಚಾರಮಾಡುತ್ತೇವೆ. So far as I know, Government has been trying its best to provide funds in time as far as possible.

ಶ್ರೀ ವಿ. ಮಸಿಯಪ್ಪ.—ಈ ಉದ್ದೇಶಗಳಿಗಾಗಿ ಕೊಟ್ಟಿರುವ ಹಣ ಯಾವ ತಿಂಗಳಿನಲ್ಲಿ ಕೊಟ್ಟಿದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ವಿಚಾರಿಸಿ ಮಾನ್ಯ ಸದಸ್ಯರಿಗೆ ತಿಳಿಸಬಹುದು.

ಶ್ರೀ ಆರ್. ಮುನಿಸ್ವಾಮಯ್ಯ.—ಇಂಡಿಯಾ ಸರ್ಕಾರದಿಂದ ಶೇಕಡ 50 ಭಾಗ ಬರುತ್ತದೆಂದು ಹೇಳುವುದು ಈ ವರ್ಷ ಬಂತೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾವು ಖರ್ಚು ಮಾಡಿದರೆ ಬರುತ್ತದೆ. ಮೊದಲೇ ಕೊಡುವುದಿಲ್ಲ. ಪ್ರೋಗ್ರಾಂ ಅಪ್ರೂವ್ ಮಾಡಿದನಂತರ ಖರ್ಚುಮಾಡಿ ಪತೆಯಬೇಕು.

ಶ್ರೀ ಸಿ. ಟಿ. ಹನುಮಂತಯ್ಯ.—ತಡವಾಗಿ ಬರುವುದರಿಂದ ತಡವಾಗಿ ಹಂಚುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಲ್ಲ.

ಶ್ರೀ ಸಿ. ಟಿ. ಹನುಮಂತಯ್ಯ.—ಅಸ್ಪೃಶ್ಯತಾ ನಿವಾರಣಾಕಾರ್ಯ ಸಮರ್ಪಕವಾಗಿ ನಡೆದಿಲ್ಲವೆಂದು ವರದಿ ಬಂದಿಲ್ಲವೇ ?

Sri H. M. CHANNABASAPPA.—Not that I know of anyway.

ಶ್ರೀ ಸಿ. ಟಿ. ಹನುಮಂತಯ್ಯ.—ಏನಾದರೂ ಆ ರೀತಿ ಬಂದಿದ್ದರೆ ಅದನ್ನು ಕ್ರಮಪಡಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಭಿವೃದ್ಧಿಗೆ ತರಬೇಕೆಂಬುದೇ ಸರಕಾರದ ಉದ್ದೇಶ.

Factories under Central Government (appointment of Mysoreans)

Q.—603. Sri V. R. NAIDU (Malleswaram).—

Will the Government be pleased to state :—

(*a*) the number of factories under their administrative control ;